
REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 11 | ISSUE - 5 | FEBRUARY - 2022

# ಬಸವಣ್ಣನವರ ವಚನಗಳಲ್ಲಿ ಜೀವನ ಸಂದೇಶ

ಶಿವರಾಜ ಶಾಮರಾವ
ಅತಿಥಿ ಉಪನ್ಯಾಸಕ
ಗುಲಬರ್ಗಾ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ ಹಾಲಹಳ್ಳಿ.

ಲೇ – ಶಿವರಾಜ ಶಾಮರಾವ.

ಜನರಲ್ಲಿ ಅಜ್ಞಾನ, ಮೂಢನಂಬಿಕೆ, ಕಂದಾಚಾರಗಳು ಹೆಚ್ಚಾದಾಗ, ಶೋಷಣೆ ನಿರಂತರವಾಗಿ ನಡೆಯುತ್ತಿದ್ದಾಗ ಸ್ತ್ರೀ–ಪುರುಷ, ಬಡವ–ಶ್ರೀಮಂತ, ಹೀಗೆ ಮೇಲು–ಕೀಳು ಎನ್ನುವ ಸಾಮಾಜಿಕ ಅಸಮಾನತೆ ಮತ್ತು ಜಾತೀಯತೆಯ ಅಂಧಕಾರದಲ್ಲಿ ಮಾನವರು ಸಿಕ್ಕಿ ನಲುಗುತ್ತಿದ್ದನ್ನು ಗಮನಿಸಿದ ಬಸವಾದಿಗಳು 'ವಚನ' ಎನ್ನುವ ವಿನೂತನ ಸಾಹಿತ್ಯದ ಮೂಲಕ ಜನರಿಗೆ ಮುಟ್ಟಿಸಿ, ಬದಲಾವಣೆಯನ್ನು ತರುವ ಕಾರ್ಯ ಮಾಡಿದರು. ವಚನಗಳು ಸಾಹಿತ್ಯದ ರಚನೆಯ ಉದ್ದೇಶದಿಂದ ಬಂದವುಗಳಲ್ಲ. ಅನುಭವಜನ್ಯದಿಂದ ಒಡಮೂಡಿದವುಗಳು. ವಚನಕಾರರಲ್ಲಿ ಪ್ರಮುಖರಾದವರೆಂದರೆ ಬಸವಣ್ಣ.




**ತಾಳಮಾನ ಸರಿಸವನರಿಯೆ**
**ಓಜೆ ಬಜಾವಣೆಯ ಲೆಕ್ಕವನರಿಯೆ,**
**ಅಮೃತಗಣ ದೇವಗಣವನರಿಯೆ,**
**ಕೂಡಲಸಂಗಮದೇವಾ, ನಿನಗೆ ಕೇಡಿಲ್ಲವಾಗಿ**
**ಆನು ಒಲಿದಂತೆ ಹಾಡುವೆ.**

ಬಸವಣ್ಣನವರು ತಮ್ಮ ಭಾವನೆಗಳನ್ನು ತಮಗೆ ಒಪ್ಪಿಗೆಯಾದ ರೀತಿಯಲ್ಲಿ ಗ್ರಹಿಸಿದರು. ಸಾಹಿತ್ಯಕ್ಕಾಗಿ ಒಂದೆಡೆ ಕುಳಿತು ಬರೆದವುಗಳಲ್ಲ, 'ಆನು ಒಲಿದಂತೆ ಹಾಡುವೆ' ಎನ್ನುವರು. ಅನುಭಾವಿಕ ಹಿನ್ನಲೆಯಲ್ಲಿ ಒಡಮೂಡಿದ ನುಡಿಗಳೇ ವಚನ ರೂಪ ತಾಳಿದವು.

ಮನುಷ್ಯನ ಜೀವನದಲ್ಲಿ ಕಷ್ಟನಷ್ಟಗಳು ಒಂದರ ಹಿಂದೊಂದು ಒದಗಿ ಬರುತ್ತಿದ್ದರೆ ಮಾನವ ತನ್ನ ಕಾರ್ಯಗಳಲ್ಲಿನ ಅಪಜಯಗಳನ್ನು ಶಪಿಸುತ್ತಾ ಕೂರುತ್ತಾನೆ. ತಾನು ಕೈಗೆತ್ತಿಕೊಳ್ಳುವ ಕೆಲಸಕ್ಕೆ ಪೂರಕ ವಾತಾವರಣ ಏರ್ಪಡದೆ ದುಃಖಿತರಾಗುತ್ತೇವೆ. ಆದರೆ ಬಸವಣ್ಣನವರು ಶಿವನ ಒಲುಮೆ, ಅನುಗ್ರಹದಿಂದ ಸಾಧ್ಯವಿದೆ ಎನ್ನುತ್ತಾರೆ.

**ನೀನೊಲಿದರೆ ಕೊರಡು ಕೊನರುವುದಯ್ಯಾ ।**
**ನೀನೊಲಿದರೆ ಒರಡು ಹಯನಹುದಯ್ಯ ।**
**ನೀನೊಲಿದರೆ ವಿಷವಮೃತವಹುದಯ್ಯ ।**
**ನೀನೊಲಿದರೆ ಸಕಲ ಪಡಿ ಪದಾರ್ಥ ಇದಿರಲ್ಲಿಪ್ಪವು**
**ಕೂಡಲಸಂಗಮದೇವ.**

ಬಸವಣ್ಣನವರು ಹೇಳುವ ಪ್ರಕಾರ ಶಿವನೊಲಿದರೆ ನಾವು ಅಸಾಧ್ಯವೆಂದು ಎದೆಗುಂದಿದ್ದ ಕಾರ್ಯಗಳು ಸುಲಲಿತವಾಗಿ ಏರ್ಪಡುವವು. ಕೊರಡು ಕೊನರುವ, ಒರಡು ಹಯನಾಗುವ, ವಿಷವು ಅಮೃತವಾಗುವ ಪ್ರಕೃತಿ ವಿರುದ್ಧ ಕಾರ್ಯಗಳು ಪವಾಡಗಳಂತೆ ಕರಗಿ ಹೋಗುವವು. ಎಂತಹ ಕಷ್ಟಗಳು, ನೋವುಗಳು, ಬಂದಂತಹ ವಿಘ್ನಗಳೆಲ್ಲಾ ಕರಗಿ ಹೋಗುವುದು ಅದಕ್ಕೆ ಬೇಕಾಗಿರುವುದು ಶಿವನ ಅನುಗ್ರಹ. ಹೀಗೆ ಭಗವಂತನ ಅನುಗ್ರಹದ ಮಹತ್ವವನ್ನು ಈ ಮೇಲಿನ ವಚನದಲ್ಲಿ ಸಾರಿದ್ದಾರೆ.

**ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ?**
**ಹೊಸ್ತಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜ ತುಂಬಿ,**
**ಮನೆಯೊಳಗೆ ಮನೆಯೊಡೆಯನಿಲ್ಲ**
**ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ**
**ಮನೆಯೊಳಗೆ ಮನೆಯೊಡೆಯನಿಲ್ಲ ಕೂಡಲ ಸಂಗಮದೇವ**

ಇಲ್ಲಿ ಬಸವಣ್ಣನವರು ಹಾಳು ಮನೆಗೆ ಮತ್ತು ಮನುಷ್ಯನ ದೇಹಕ್ಕೆ ಹೋಲಿಸಿದ್ದಾರೆ. ಮೈಯ ಹೊರ ಅಂಗಳದಲ್ಲಿ ಹುಸಿ, ಒಳ ಅಂಗಳದಲ್ಲಿ ವಿಷಯ ವಾಸನೆ ತುಂಬಿದ್ದ ಮೇಲೆ, ಆ ಹೀನ ಮಾನವನು ಪಾಳು ಮನೆಗಿಂತ ಕೀಳೂ! ಅಂಥವನತ್ತ ಪರಮಾತ್ಮನ ಸೆರಗಿನ ಗಾಳಿಯೂ ಸುಳಿಯುವುದಿಲ್ಲ! ಅಂಥವನ ಬಹಿರಂತರ್ದೇಹ ದೇವರ ಗೇಹವಾಗಿರದೆ ಪಂಚಭೂತ ವಿಕಾರಗಳ ವಂಚನಾಗಾರವಾಗಿರುವುದು.

**ನುಡಿದರೆ ಮುತ್ತಿನಹಾರದಂತಿರಬೇಕು**
**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು**
**ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು**
**ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು**
**ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮದೇವನೆಂತೊಲಿವನಯ್ಯ?**

ನಮ್ಮ ನುಡಿಗಳ ಮಹತ್ವ ಹಾಗೂ ಹೇಗಿರಬೇಕೆಂಬುದನ್ನು ಆದರ್ಶ ನಿರೂಪಣೆಯೊಂದಿಗೆ ಬಸವಣ್ಣನವರು ಮೇಲಿನ ವಚನದಲ್ಲಿ ನೀಡಿದ್ದಾರೆ. ನುಡಿದರೆ ಮುತ್ತಿನ ಹಾರದಂತೆ 'ಸುಂದರ'ವಾಗಿರಬೇಕು. ಮಾಣಿಕ್ಯದ ದೀಪ್ತಿಯಂತೆ ತಂಪಾದ ಬೆಳಕನ್ನು ನೀಡಬೇಕು. ಸ್ಫಟಿಕದ ಸಲಾಕೆಯಂತೆ ಒಳಗು ಹೊರಗೆಲ್ಲ ಪಾರದರ್ಶಕವಾಗಿ 'ನಿಜ' ನಿಂತಿರಬೇಕು. ಅಷ್ಟೇ ಅಲ್ಲದೆ ಪರಮ ಸತ್ಯವಾದ ಲಿಂಗ ಮೆಚ್ಚಿ ಸೈ ಎನ್ನುವಂತಿರಬೇಕು. ಅಂತಹ ನುಡಿಗೆ ತಕ್ಕನಾದ ನಡತೆಯೂ ಇರಬೇಕೆನ್ನುತ್ತಾರೆ. ಇದು ಬಸವಣ್ಣನವರ ಜೀವನದ ಮುಖ್ಯ ತತ್ವವೂ ಆಗಿದೆ. ಹೀಗೆ ಬಸವಣ್ಣನವರು ತನ್ನ ಜೀವನವೇ ತನ್ನ ಸಂದೇಶವೆಂಬಂತೆ ಪಾಲಿಸಿ ಆದರ್ಶಪ್ರಾಯರಾಗಿದ್ದಾರೆ.

**ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,**
**ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,**
**ತನ್ನ ಬಣ್ಣಿಸಬೇಡ, ಇದರಿ ಹಳಿಯಲು ಬೇಡ,**
**ಇದೇ ಅಂತರಂಗಶುದ್ಧಿ, ಇದೇ ಬಹಿರಂಗ ಶುದ್ಧಿ**
**ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ**

ದೇವರನ್ನು ಒಲಿಸಿಕೊಳ್ಳುವ ಸುಲಭ ದಾರಿಯನ್ನು ಬಸವಣ್ಣನವರು ಸರಳವಾಗಿ ಮೇಲಿನ ವಚನದಲ್ಲಿ ವಿವರಿಸಿದ್ದಾರೆ. ದೇವರ ಅನುಗ್ರಹವನ್ನು ಪಡೆದುಕೊಳ್ಳಲು ಗುಡಿಗೆ ಹೋಗಿ ದೇವರನ್ನು ಸ್ತುತಿಸಿ, ಹಣ್ಣುಕಾಯಿ ಅರ್ಪಿಸಿ, ಕರ್ಪೂರ ಬೆಳಗುವುದರಿಂದ, ಧ್ಯಾನ, ತಪಸ್ಸು ಮಾಡುವುದರಿಂದ ಸಾಧ್ಯವಿಲ್ಲ ಬದಲಾಗಿ ಅಂತರಂಗ, ಬಹಿರಂಗ ಶುದ್ಧಿ ಮಾಡಿಕೊಳ್ಳಬೇಕು. ಜೊತೆಗೆ ಮುಖ್ಯವಾಗಿ ಸಪ್ತಶೀಲಗಳೆಂಬ ಏಳು ಆಚರಣೆಗಳನ್ನು ಹೇಳಿದ್ದಾರೆ. ಕಳ್ಳತನ ಮಾಡದಿರುವುದು, ಕೊಲ್ಲದಿರುವುದು, ಸುಳ್ಳು ಹೇಳದಿರುವುದು, ಸಿಟ್ಟಾಗದಿರುವುದು, ಅನ್ಯರನ್ನು ಕಂಡು ಅಸಹ್ಯಪಡದಿರುವುದು, ತನ್ನನ್ನೇ ಇಂದ್ರ ಚಂದ್ರ ಎಂದು ಹೊಗಳಿಕೊಳ್ಳದಿರುವುದು, ಇತರರನ್ನು ದೂಷಣೆ ಮಾಡದಿರುವುದು–ಇವೇ ಆ ಸೂತ್ರಗಳು. ಈ ಏಳು ಸೂತ್ರಗಳನ್ನು ವ್ಯಕ್ತಿ ತನ್ನ ನಿತ್ಯ ಬದುಕಿನಲ್ಲಿ ಆಚರಣೆಗೆ ತಂದರೆ ಅವನ ಅಂತರಂಗ, ಬಹಿರಂಗ ಎರಡೂ ಶುದ್ಧವಾಗುವುವು. ತೀರ್ಥಕ್ಷೇತ್ರಗಳಿಗೆ ಹೋಗಬೇಕಿಲ್ಲ, ಪುಣ್ಯಸ್ನಾನ ಮಾಡಬೇಕಿಲ್ಲ. ಹೀಗೆ ಸರಳವಾಗಿ ದೇವರ ಅನುಗ್ರಹ ಒಲಿಸಿಕೊಳ್ಳುವ ವಿಚಾರವನ್ನು ಹೇಳಿದ್ದಾರೆ.

**ಉಳ್ಳವರು ಶಿವಾಲಯದ ಮಾಡಿಹರು !**
**ನಾನೇನ ಮಾಡುವೆ ಬಡವನಯ್ಯ?**
**ಎನ್ನ ಕಾಲೇ ಕಂಭ । ದೇಹವೇ ದೇಗುಲ !**
**ಶಿರ ಹೊನ್ನಕಳಶವಯ್ಯ !**
**ಕೂಡಲಸಂಗಮದೇವ ಕೇಳಯ್ಯ**
**ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ !**

ಶಿವಭಕ್ತಿಯನ್ನು ಸಾರಲು ಶಿವಾಲಯಗಳನ್ನು ಕಟ್ಟಿಸಿದರೆ ಅವುಗಳು ಇಂದಲ್ಲ ನಾಳೆ ಕುಸಿಯಬಹುದು. ಆದರೆ ತಮ್ಮ ನಡೆ ಮತ್ತು ನುಡಿಗಳಲ್ಲಿ ಶಿವ ಸಂದೇಶವನ್ನು ಆಚರಿಸಿದರೆ ಅದು ಶಾಶ್ವತವಾಗಿರುತ್ತದೆ. ಅಂತಹ ಶಿವಜೀವಸಂತಾನ ನಿರ್ಮಿತವಾಗಬೇಕು ಎನ್ನುತ್ತಾರೆ. ದೇವಾಲಯ ನಿರ್ಮಾಣ ಬಹಿಸ್ಸಂಪತ್ತನ್ನು ಅವಲಂಭಿಸಿದರೆ, ಸಂತ ನಿರ್ಮಾಣ ಅಂತಸ್ಸಂಪತ್ತಿಯನ್ನು ಅವಲಂಭಿಸಿದೆ. ಮೊದಲನೆಯದು ಧನವ್ಯಯ ಮಾತ್ರ ಸಾಧ್ಯವಾಗಿರುವುದರ ಜೊತೆಗೆ ಅಶ್ವಾಶ್ವತವೂ ಹೌದು! ಎರಡನೆಯದು, ಮನವ್ಯಯ ಮಾತ್ರ ಸಾಧ್ಯವಾಗಿರುವುದರ ಜೊತೆಗೆ ಅದು ಶಾಶ್ವತವೂ ಸುಲಭವೂ ಆಗಿದೆ. ಆದುದರಿಂದಲೇ ಬಸವಣ್ಣನವರು ಹೇಳುವಂತೆ ನಮ್ಮ ದೇಹವೇ ದೇವಾಲಯವಾಗಬೇಕು. ಕಲಶಕ್ಕೆ ಕುಂಭ ಆಧಾರವಾದಂತೆ ಜ್ಞಾನಕ್ಕೆ ಆಚರಣೆ ಆಧಾರವಾಗಿ, ಅಲ್ಲಿ ದೇವರು ಬಂದು ನೆಲೆಸುವಂತಾಗಬೇಕು ಎಂದು.

**ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯ**
**ಪಶುವೇನ ಬಲ್ಲುದು? ಹಸುರೆಂದಳಸುವುದು.**
**ವಿಷಯರಹಿತನ ಮಾಡಿ ಭಕ್ತಿರಸವ ದಣಿಯೆ ಮೇಯಿಸಿ**
**ಸುಬುದ್ಧಿಯೆಂಬುದಕವನೆರೆದು,**
**ನೋಡಿ ಸಲಹಯ್ಯ, ಕೂಡಲ ಸಂಗಮದೇವಾ ॥**

ಜನಜೀವನಕ್ಕೆ ಪರಿಚಿತವಾದ ಸಂಗತಿಯನ್ನೆತ್ತಿಕೊಂಡು ಅದಕ್ಕೆ ಕಾವ್ಯದ ರೂಪವನ್ನು ನೀಡಿ ಅನುಭವವನ್ನು ಧಾರೆಯೆರೆಯುವುದು ಬಸವಣ್ಣನವರ ರೀತಿಯಿದು. ದಿನನಿತ್ಯದ ಜೀವನದ ಸಾಮಾನ್ಯ ವಿಷಯಗಳು ತಮ್ಮ ಪ್ರತಿಭೆಯಲ್ಲಿ ಆಕಾರ ನೀಡುತ್ತಾರೆ. ವಿಷಯವೆಂಬ ಹಸುರು ಮುಂದೆ ಇರುವಾಗ ತಿಳಿಯದು ಹಸು ಏನೂ ಯೋಚಿಸದೆ ಅದನ್ನು ಮನಬಂದಂತೆ ತಿನ್ನುತ್ತದೆ. ಜೀವನದಲ್ಲಿನ ವಾಸನಾಬಲ, ಅಸಹಾಯಕತೆ, ಮುಗ್ಧತೆ-ಇವೆಲ್ಲವೂ ಎರಡನೆಯ ಸಾಲಿನಲ್ಲಿ ಸಹಜವಾಗಿ ಬಂದಿವೆ. ಹಸುವಿನ ಮಾಲೀಕ ಅದಕ್ಕೆ ತಕ್ಕ ಮೇವು ನೀರು ಕೊಟ್ಟು ಸಾಕಬೇಕು. ಮುಂದಿನ ಸಾಲುಗಳಲ್ಲಿ **'ಹಸು'** ಭಕ್ತ ಜೀವವಾಗಿ ಮಾರ್ಪಟ್ಟು ಭಕ್ತಿರಸವನ್ನು ಸುಬುದ್ಧಿಯೆಂಬ ನೀರನ್ನು ಬಯಸಿ ಮೊರೆಯಿಡುತ್ತದೆ. ಇಡೀ ವಚನ ಬಾವ ಅರ್ಥಭಾರದಿಂದ ಬಳಕುತ್ತದೆ. ಇಂತಹ ವಚನಗಳಲ್ಲಿ ಬಸವಣ್ಣನವರ ಕಾವ್ಯಶಕ್ತಿಯ ಪರಿಪೂರ್ಣ ಸಿದ್ಧಿಯನ್ನು ಕಾಣುತ್ತೇವೆ.

**ಕಾಗೆಯೊಂದಗುಳು ಕಂಡರೆ**
**ಕರೆಯದೇ ತನ್ನ ಬಳಗವೆಲ್ಲವ?**
**ಕೋಳಿಯೊಂದು ಕುಟುಕ ಕಂಡರೆ**
**ಕೂಗಿ ಕರೆಯದೆ ತನ್ನ ಕುಲವೆಲ್ಲವ?**
**ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ**
**ಆ ಕಾಗೆ ಕೋಳಿಯಿಂದ ಕರಕಷ್ಟ ಕೂಡಲಸಂಗಮದೇವ!**

ಈ ಮೇಲಿನ ವಚನದಲ್ಲಿ ಸಮಾಜ ಜೀವಿಯಾದ ಮನುಷ್ಯ ಕೂಡಿ ಬಾಳುವ, ಹಂಚಿ ತಿನ್ನುವ ಸಹಜ ಪ್ರವೃತ್ತಿಯನ್ನು ಕಳೆದುಕೊಂಡು ಕಾಗೆ ಕೋಳಿಗಳಿಗಿಂತ ಕೀಳಾಗಿ ವರ್ತಿಸಬಾರದು ಬಸವಣ್ಣ ನುಡಿದಿದ್ದಾರೆ. ಚೆಲ್ಲಿದ ಅಗುಳನ್ನು ನೋಡಿದ ಕಾಗೆ ತನ್ನ ಗುಂಪನ್ನೆಲ್ಲಿ ಕರೆಯುತ್ತದೆ. ಕೋಳೀಗೆ ಸಿಕ್ಕ ಆಹಾರವನ್ನು ಮರಿಮಂದಿಗೆಲ್ಲ ಹಂಚುತ್ತದೆ. ಅದೇ ರೀತಿ ಭಕ್ತನಾದವನಿಗೆ ಉಳಿದವರೆಲ್ಲ ದೈವಭಕ್ತರೆ ಎಲ್ಲರೂ ದೇವರಿಗೆ ಸೇರಿದವರೆ, ಕುಲಗಳೆಲ್ಲ ಒಂದೇ ಅದೇ ಶಿವನ ಕುಲ ಆದ್ದರಿಂದ ಶಿವನೊಡೆಯನ ರಕ್ಷಾ ಚಪ್ಪರದಡಿಯಲ್ಲಿರುವ ಎಲ್ಲರೂ ಒಂದೇ, ಬಂಧುಬಾಂಧವರೆಲ್ಲರೂ ಹಂಚಿ ತಿನ್ನಬೇಕೆಂದು ಬಸವಣ್ಣ ಈ ವಚನದಲ್ಲಿ ಸಾರಿದ್ದಾರೆ.

**ದಯವಿಲ್ಲದ ಧರ್ಮದವದೇವುದಯ್ಯ?**
**ದಯವೇ ಬೇಕು ಸಕಲ ಪ್ರಾಣಿಗಳಿಗೆಲ್ಲಾ !**
**ದಯವೇ ಧರ್ಮದ ಮೂಲವಯ್ಯ !**
**ಕೂಡಲಸಂಗಯ್ಯನಂತಲ್ಲದೊಲ್ಲನಯ್ಯ!**

ಸಹಾನುಭೂತಿ, ಅನುಕಂಪ, ಕರುಣೆಯೇ ಸಮಾಜದ ಮೂಲಾಧಾರ, ಏಕೆಂದರೆ ಸಮಾಜ ಎನ್ನುವುದು ಎಲ್ಲಾ ಜೀವಿಗಳ ಅನುಬಂಧದ ಸಮೂಹವೇ ಆಗಿದೆ. ಈ ದಯೆಯ ಮೂಲಾಂಶವಿಲ್ಲದೆ ಯಾವ ಧರ್ಮವೂ ತನ್ನ ಮೂಲೋದ್ದೇಶವಾದ ಸಮಷ್ಟಿಹಿತವನ್ನು ಕಿಂಚಿತ್ತೂ ಸಾಧಿಸುವುದಿಲ್ಲ. ವೈರತ್ವ, ಅಸೂಯೆ, ಹಿಂಸೆಯೆನ್ನುವುದು ಸಮಾಜಕ್ಕೆ ಕಂಟಕವಾಗಿರುತ್ತದೆ. ಆದ್ದರಿಂದ ಯಾವುದೇ ಧರ್ಮ ಸಂಸ್ಥಾಪಕರಾದರು ಸರಿಯೇ ದಯೆಗೆ ಮೊದಲ ಪ್ರಾಶಸ್ತ್ಯ ನೀಡಿದ್ದಾರೆ. ಬಸವಣ್ಣನವರು ದಯೆಯೇ ಇಲ್ಲದಿದ್ದ ಧರ್ಮವಿಲ್ಲ, ಸಕಲ ಜೀವರಾಶಿಗಳಲ್ಲಿ ದಯೆ ತೋರಿ ನಮ್ಮಂತೆಯೇ ಭಾವಿಸಬೇಕು, ಯಾವುದೇ ಧರ್ಮದ ಮೂಲ ದಯೆಯೇ ಆಗಿರುತ್ತದೆ ಎನ್ನುತ್ತಾರೆ.

**ಕೊಲುವನೇ ಮಾದಿಗ**
**ಹೊಲಸ ತಿಂಬವನೇ ಹೊಲೆಯ**
**ಕುಲವೇನೋ ಆವಂದಿರ ಕುಲವೇನೋ?**
**ಸಕಲ ಜೀವಾತ್ಮರಿಗೆ ಲೇಸನೇ ಬಯಸುವ**
**ನಮ್ಮ ಕೂಡಲಸಂಗನ ಶರಣರೇ ಕುಲಜರು**

ಮಾದಿಗ ಜಾತಿ, ಹೊಲೆಯ ಜಾತಿಯವರನ್ನು ಹೀನವಾಗಿ ಕಾಣುವ ಜನರು, ಪರಜೀವಿಗಳ ಹಿಂಸಿಸುತ್ತಿರುವ, ದೇವರ ನೆಪದಲ್ಲಿ ಪ್ರಾಣಿಗಳನ್ನು ಕೊಂದು ತಿನ್ನುವ ಜನರಲ್ಲಿನ ಹೀನತ್ವವನ್ನು ಕಾಣುತ್ತಿಲ್ಲ. ಊರ ಹೊರಗೆ ಇರುವವರು ಹೊಲೆಯರಲ್ಲ, ಹೊಲಸು ತಿನ್ನುವವನೇ ಹೊಲೆಯ. ಯಾವ ಮನುಷ್ಯ ಯಾವ ಕುಲದಲ್ಲಿ ಹುಟ್ಟಿದರೇನು. ಸಕಲರಲ್ಲಿರುವ ಪರಮಾತ್ಮನನ್ನು ಗುರುತಿಸುವವನೆ ಉತ್ತಮ ಕುಲದವನು ಇಲ್ಲದಿದ್ದರೆ ಆತ ನೀಚನಾಗಿರುತ್ತಾನೆ. ಹೀಗೆ ಬಸವಣ್ಣನವರು ವಿಶ್ವಮಾನವನ ನಿಜ ಸಂದೇಶವನ್ನು ಹೀಗೆ ನೀಡಿದ್ದಾರೆ.

**ಮಾಡುವ ಭಕ್ತನ ಕಾಯ ಬಾಳೆಯ ಕಂಭದಂತಿರಬೇಕು**
**ಮೆಲ್ಲ ಮೆಲ್ಲನೆ ಹೊರೆಯೆತ್ತಿ ನೋಡಿದರೆ**
**ಒಳಗೆ ಕೆಚ್ಚಿಲ್ಲದಿರಬೇಕು**
**ಮೇಲಾದ ಫಲವ ನಮ್ಮವರು ಬೀಜ ಸಹಿತ ನುಂಗಿದರು**
**ಎನಗಿನ್ನಾವ ಭಯವಿಲ್ಲ, ಕಾಣಾ ಕೂಡಲ ಸಂಗಮದೇವಾ**

ಭಕ್ತನಲ್ಲಿ ಅಹಂಕಾರ ಮತ್ತು ಮಮಕಾರಗಳು ಇರಬಾರದು. ಆದರೆ ಅನೇಕರು ಅಹಂಕಾರವನ್ನು ಬಿಡದೆ ತಮ್ಮನ್ನು ಭಕ್ತನೆಂಬಂತೆ ಬಿಂಬಿಸಿಕೊಳ್ಳುತ್ತಾರೆ. ಬಸವಣ್ಣನವರು ಬಾಳೆ ಕಂಬವನ್ನು ಪ್ರತಿಮೆಯಾಗಿ ತೆಗೆದುಕೊಂಡಿದ್ದು, ಅಂತಹ ಭಕ್ತರಿಗೆ ಸರಿಯಾಗಿ ಹೋಲುತ್ತದೆ. ಇಲ್ಲಿ ಭಗವಂತ ಭಕ್ತನ ನಿರಪೇಕ್ಷ ಭಾವನೆಯನ್ನು ಪರೀಕ್ಷಿಸಲು ಹೀಗೆ ಸಿಪ್ಪೆ ಸುಲಿದು ನೋಡುತ್ತಾನೆಂಬ ಭಾವವೂ ಇಲ್ಲಿದೆ. ಬಾಳೆ ಕಂಬದ ಹೊರಮೈಯಲ್ಲಿರುವ ಅನೇಕ ಪೊರೆಗಳು, ಅನೇಕ ದುಷ್ಟ ಸ್ವಭಾವಕ್ಕೆ ಸಂಬಂಧಿಸಿವೆ. ಭಕ್ತನಲ್ಲಿರುವ ಈ ಕೆಟ್ಟ ಪೊರೆಗಳು ಕಳಚಿದಾಗ ಮಾತ್ರ ಭಗವಂತನ ಅನುಗ್ರಹ ಪಡೆಯಲು ಸಾಧ್ಯವಾಗಿ ನಿಜ ಭಕ್ತನಾಗುತ್ತಾನೆ. ಇವನಿಗೆ ಫಲಾಪೇಕ್ಷೆಯೇ ಇಲ್ಲ. ಬಂದ ಫಲವನ್ನು ಶರಣರಿಗೆ ಅರ್ಪಿಸಿಬಿಟ್ಟಿದ್ದಾನೆ. ಬೀಜ ಸಹಿತ ನುಂಗಿದರು ಎಂಬ ಮಾತು ಮತ್ತೆ ಭವದಲ್ಲಿ ಬಾರದಂತೆ ಅದರಿಂದ ಮುಕ್ತನನ್ನಾಗಿ ಮಾಡಿದರು ಎಂಬುದನ್ನು ಸುಂದರವಾಗಿ ಧ್ವನಿಸುತ್ತದೆ.

**ನೆಲನೊಂದೇ ಹೊಲಗೇರಿ ಶಿವಾಲಯಕ್ಕೆ !**
**ಜಲವೊಂದೇ ಶೌಚಾಚಮನಕ್ಕೆ !**
**ಕುಲವೊಂದೇ ತನ್ನ ತಾನರಿದವಂಗೆ !**
**ಫಲವೊಂದೇ ಷಡುದರ್ಶನ ಮುಕ್ತಿಗೆ !**
**ನಿಲುವೊಂದೇ–ಕೂಡಲಸಂಗಮದೇವ, ನಿಮ್ಮನರಿದವಂಗೆ !**

ಒಳ್ಳೆಯ ಅಥವಾ ಕೆಟ್ಟ ಆಚರಣೆಗಳ ಆಧಾರದಿಂದಲ್ಲದೆ ಯಾರನ್ನೇ ಆಗಲಿ ಒಳ್ಳೆಯವ ಕೆಟ್ಟವ ಎಂದು ನಿರ್ಣಯಿಸಲು ಸಾಧ್ಯವಾಗುವುದಿಲ್ಲ ನೆಲ ಒಂದೇ ಆದರೂ ಶಿವಾಲಯ ನಿರ್ಮಿಸಿದರೆ ಅದು ಪವಿತ್ರಕ್ಷೇತ್ರವಾಗುವುದು, ದುಷ್ಟರು ನೆಲೆಸಿದರೆ ಹೊಲೆಗೇರಿಯಾಗುವುದು. ಅದೇ ರೀತಿ ನೀರನ್ನು ದೇವಸ್ಥಾನದಲ್ಲಿ ಬಳಸಿದರೆ, ಪುಣ್ಯಸ್ನಾನಕ್ಕೆ ಬಳಸಿದರೆ ಅದು ತೀರ್ಥವಾಗುತ್ತದೆ, ಶೌಚಕ್ಕೆ ಬಳಸಿದರೆ ಅದು ಮಲಿನವಾಗುತ್ತದೆ. ಅದೇ ರೀತಿ ಮಾನವ ಯಾವುದೋ ಕುಲದಲ್ಲಿ ಹುಟ್ಟಿದ ಮಾತ್ರಕ್ಕೆ ಉತ್ತಮ ಅಥವಾ ನೀಚನಾಗುವುದಿಲ್ಲ. ತಾನು ಮಾಡುವ ಕರ್ಮ ಹಾಗು ಜ್ಞಾನದಿಂದ ಮೇಲು–ಕೀಳು ಎನಿಸಿಕೊಳ್ಳುತ್ತಾನೆ. ಬೇಕೆ ಬೇರೆ ಜಾತಿ, ಕುಲಗಳಲ್ಲಿ ಹುಟ್ಟಿದರೂ ಸಹ ಆಯಾ ಜಾತಿಗಳಿಗೆ ಬೇರೆ ಬೇರೆ ದರ್ಶನ–ಸಿದ್ಧಾಂತಗಳಿದ್ದು, ಎಲ್ಲದರ ಉದ್ದೇಶ ಮುಕ್ತಿಯೇ ಆಗಿರುತ್ತದೆ. ಹೀಗೆ ಬಸವಣ್ಣನವರು ಜಾತಿಗಳ ಆಧಾರದಿಂದ ಜನರನ್ನು ಮೇಲು–ಕೀಳೆಂದು ವಿಂಗಡಿಸುವುದನ್ನು ವಿರೋಧಿಸಿದ್ದಾರೆ.

ಪಾಶ್ಚಾತ್ಯರ ಅನುಕರಣೆ ಹೆಚ್ಚಾಗಿ ಕುಟುಂಬ ಜೀವನ, ಮನಃಶಾಂತಿ, ನೈತಿಕತೆ, ಭಕ್ತಿ, ಆತ್ಮವಿಶ್ವಾಸ, ಸದಾಚಾರ ಮುಂತಾದವುಗಳನ್ನು ಇಂದಿನ ಜನ ಕಳೆದುಕೊಳ್ಳುತ್ತಿದ್ದಾರೆ. ನಮ್ಮ ನಾಡಿನ ಅಮೂಲ್ಯ ಸಾಹಿತ್ಯವಾದ ವಚನ ಸಾರವನ್ನು ಜನರು ಅರ್ಥಮಾಡಿಕೊಳ್ಳುತ್ತಿಲ್ಲ. ಬಸವಣ್ಣನವರ ವಚನಗಳನ್ನು ನಮ್ಮ ನಡೆ ನುಡಿಗಳಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು. ಇಂತಹ ಮುತ್ತಿನಂತಹ ವಚನಸಾರವನ್ನು ಗ್ರಹಿಸಿ, ಜೀವನದಲ್ಲಿ ಅಳವಡಿಸಿಕೊಂಡಾಗ ಮನ, ಮನೆಗಳೆರಡೂ ಬೆಳಗುತ್ತವೆ. ಇದರಿಂದ ಭಾರತೀಯ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಬಹುದು. ಆಗ ಸಮಾಜ ನೈತಿಕತೆಯ ತಳಹದಿಯಲ್ಲಿ ಸಾಗುತ್ತದೆ. ಅದಕ್ಕೆ ಬೇಕಾದ ಭದ್ರ ಬುನಾದಿ ಬಸವಣ್ಣನವರಂತಹ ವಚನದಿಂದ ಸಿಗುತ್ತದೆ. ಬಸವಣ್ಣನವರು ಧರ್ಮಸಾರವನ್ನು ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಸರಳವಾಗಿ ಹೇಳಿದ್ದಾರೆ. ಇಂದಿಗೂ ಸಮಾಜದಲ್ಲಿನ ಜಾತಿ–ಬೇಧ, ಮೇಲು–ಕೀಳು, ಲಿಂಗ ತಾರತಮ್ಯ, ಅಸಮಾನತೆಯನ್ನು ಇಂದಿಗೂ ಹೋಗಲಾಡಿಸಲು ಸಾಧ್ಯವಾಗಿಲ್ಲ. ಬಸವಣ್ಣನವರ ವಚನಸಾರವನ್ನು ಇಂದಿನ ಜನಾಂಗ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದೇ ಆದಲ್ಲಿ ನೈತಿಕತೆಯ ಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ ಜಯ ಹೊಂದಬಹುದು.

ಹನ್ನೆರಡನೆಯ ಶತಮಾನದಲ್ಲಿಯೇ ಬಸವಣ್ಣನವರು ನೈತಿಕತೆ, ಮಾನವತ್ವ, ಭಕ್ತಿ, ಕಾಯಕ, ದಯೆ, ಶರಣತ್ವ, ಜ್ಞಾನ, ಜಾತೀಯತೆ, ಮಹಿಳಾ ಸಮಾನತೆ ಹೀಗೆ ಸರ್ವವಿಧದಲ್ಲಿ ಅಜ್ಞಾನದಿಂದ ಕತ್ತಲ ಬದುಕ ನಡೆಸುವ ಸಹಜೀವಿಗಳಿಗೆ ಜ್ಞಾನದ ಬೆಳಕನ್ನು ನೀಡಲು ತಮ್ಮ ಜೀವನವನ್ನೇ ಮುಡುಪಾಗಿಟ್ಟರು. ಬಸವಣ್ಣಾದಿಗಳು ಸಾಗಿಬಂದ ದಾರಿಯಲ್ಲಿ ಇಹಪರವೆರಡನ್ನೂ ತೋರಿಸಿದರು. ಅದೇ ಪರಮಾರ್ಥ ಪಥವಾಗಿದೆ. ಯುಗಯುಗಗಳಿಂದ ಮೃತಪ್ರಾಯರಾಗಿದ್ದ ಸಾಮಾನ್ಯ ಜನರನ್ನೇ ಸಾಧಕರನ್ನಾಗಿ, ಶರಣರನ್ನಾಗಿ ಮಾಡಿದ ವಿಸ್ಮಯ ಜನಕವಾದ ಸಾಮಾಜಿಕ ಕ್ರಾಂತಿಯನ್ನು ಬಸವಣ್ಣನವರು ಮಾಡಿದರು. ಬಸವಣ್ಣನವರ ಮಹತ್ವ ಕಾಣುವುದೇ ಅವರ ಲೌಕಿಕ, ಆಧ್ಯಾತ್ಮಿಕ ಬೆಸುಗೆಯಲ್ಲಿ ಅವರು ಕೇವಲ ವ್ಯಕ್ತಿಗತ ವಿಕಾಸಕ್ಕೆ ಒತ್ತುಕೊಟ್ಟವರಲ್ಲ. ವ್ಯಷ್ಟಿ ಮತ್ತು ಸಮಷ್ಟಿ ಎರಡು ಚೆನ್ನಾಗಿದ್ದಾಗ ಮಾತ್ರ ಬದುಕು ಸುಂದರವಾಗಲು ಸಾಧ್ಯವೆನ್ನುವ ನಿಲುವು ಅವರದಾಗಿತ್ತು. ಅಂಥ ಅಮೂಲ್ಯ ತತ್ತ್ವಗಳನ್ನು ಬಸವಣ್ಣನವರು ವಚನ ಸಾಹಿತ್ಯದ ಮೂಲಕ ನಮಗೆ ಬಿಟ್ಟು ಹೋಗಿದ್ದಾರೆ.

## ಪರಾಮರ್ಶನ ಗ್ರಂಥಗಳು :


1) **ಎಚ್ ತಿಪ್ಪೇರುದ್ರಸ್ವಾಮಿ, (1991) ಶರಣರ ಅನುಭವ ಸಾಹಿತ್ಯ ಡಿವಿಕೆ ಮೂರ್ತಿ ಪ್ರಕಾಶನ ಮೈಸೂರು**
2) **ಡಾ. ಎಲ್ ಬಸವರಾಜು (2008) ಬಸವಣ್ಣನವರ ವಚನಗಳು ಪ್ರಕಾಶಕರು ಗೀತಾ ಬುಕ್ ಹೌಸ್ ಮೈಸೂರು**
3) **ಎಂ.ಆರ್. ಶ್ರೀನಿವಾಸಮೂರ್ತಿ (2013) ವಚನ ಧರ್ಮಸಾರ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು**
4) **ಎಮ್.ಎಮ್. ಕಲಬುರಗಿ ಪ್ರ. ಸಂ (2016) ಬಸವ ಯುಗದ ವಚನ ಮಹಾಸಂಪುಟ ಒಂದು, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು**
5) **ಎಸ್. ಎಂ. ಹಿರೇಮಠ ಸಂ (2011) ವಚನ ಕಾವ್ಯ ಚಿಂತನೆ ಕನ್ನಡ ಅಧ್ಯಯನ ಸಂಸ್ಥೆ, ಕಲಬುರ್ಗಿ**